ನಾನೂ ಕೂಡ ಅನೇಕಸಾರಿ ಮುಖ್ಯ ಮಂತ್ರಿಗಳ ಹತ್ತಿರ ಇದರ ಬಗ್ಗೆ ವಿಸ್ತಂತಿಸಿಕೊಂಡಿದ್ದೇನೆ. ಇದರ ಬಗ್ಗೆ ಬಜೆಟ್ ಭಾಷಣದಲ್ಲಿ ಹೇಳುತ್ತೇರೆಂದು ಹೇಳಿದ್ದೀರಿ, ಆದರೆ ಎಲ್ಲೂ ಸಹ ಇದರ ಬಗ್ಗೆ ಹೇಳಲಿಲ್ಲ. ಬಜೆಟ್ ಭಾಷಣದಲ್ಲಿ ಹೊಸದಾಗಿ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದರ ಬಗ್ಗೆ ಚರ್ಚೆ ಮಾಡಿದ್ದೀರಿ. ಆದರೆ ಇದನ್ನು ಪುನಶ್ಚೇತಗೊಳಿಸುವ ಬಗ್ಗೆ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ನೀವು ಇದರ ಬಗ್ಗೆ ನಿರ್ದಿಷ್ಟವಾಗಿ ಏನಾಗುತ್ತದೆ ? ಯಾವ ರೀತಿ ಕೊಡುತ್ತೀರಿ ? ಎನ್ನುವುದನ್ನು ಈಗಲೇ ಹೇಳಲು ಸಾಧ್ಯವಿದೆ. ಇದಕ್ಕೆ ದಯವಮಾಡಿ ಉತ್ತರವನ್ನು ಕೊಡಬೇಕು.

ಶ್ರೀ ರಾಮಲಿಂಗರೆಡ್ಡಿ.—ಈಗ ಸಮಿತಿಯು ಅದರ ಬಗ್ಗೆ ತೀರ್ಮಾನವನ್ನು ತೆಗೆದುಕೊಂಡಿದೆ ಅದು ತಮಗೂ ಗೊತ್ತಿದೆ. ಆ ವರದಿ ಸರ್ಕಾರದ ಮುಂದೆ ಇದೆ. ಇನ್ನು ಒಂದು ತಿಂಗಳಿನಲ್ಲಿ ಇವನ್ನು ಯಾವ ರೀತಿಯಲ್ಲಿ ಪುನಶ್ಚೇತನ ಮಾಡಬೇಕೆಂದು ಸಮಿತಿ ವರದಿಕೊಟ್ಟಿದೆ ಅದರಂತೆ ನಡೆದು ಕೊಳ್ಳುತ್ತೇವೆ. ತಾವು ಹೇಳಿರುವ ಎಲ್ಲಾ ಸಮಸ್ಯೆಗಳನ್ನು ಸಹ ನಾನು ಒಪ್ಪಿಕೊಳ್ಳುತ್ತೇನೆ. ಆ ಎಲ್ಲಾ ಸಮಸ್ಯೆಗಳಿಗೆ ಪರಿಹಾರವನ್ನು ಸಮಿತಿಯವರು ಕೊಟ್ಟಿದ್ದಾರೆ. ಒಂದು ತಿಂಗಳಿನಲ್ಲಿ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಟಿ. ಬಿ. ಜಯಚಂದ್ರ.—ಸಮಿತಿಯವರು ಕೊಟ್ಟಿರುವ ಎಲ್ಲಾ ತೀರ್ಮಾನವನ್ನು ತಾವು ಒಪ್ಪಿಕೊಂಡರೆ ಸಾಕು.

ಶ್ರೀ ರಾಮಲಿಂಗಾರೆಡ್ಡಿ.—ಎಲ್ಲವನ್ನೂ ಒಪ್ಪಿಕೊಳ್ಳಲು ಸಾಧ್ಯವಾಗುವುದಿಲ್ಲ. ಈ ಸಿಮೆಂಟ್ ಕಾರ್ಖಾನೆಗಳ ಪುನಶ್ಚೇತನ ಮಾಡುವುದಕ್ಕೆ ಏನೇನು ಸಾಧ್ಯತೆಗಳಿವೆಯೋ ಅದನ್ನೆಲ್ಲಾ ಮಾಡುತ್ತೇವೆಂದು ಹೇಳುತ್ತೇನೆ.

"ರಾಮತೀರ್ಥ" ಪ್ರವಾಸಿ ಕೇಂದ್ರದ ಅಭಿವೃದ್ಧಿ

೨೭೨(ಶೂನ್ಯ) ಶ್ರೀ ಕೆ. ಸಿ. ಮೋಡಗೇಕರ್ ದೇಸಾಯಿ (ಹಿರೇಬಾಗೆವಾಡಿ).—ಮಾನ್ಯ ಪ್ರವಾಸೋದ್ಯಮ ಹಾಗೂ ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಬೆಳಗಾಂ ತಾಲ್ಲೂಕಿನ ಕೊಯಿರಬೊವನ್ನಿಹಳ್ಳಿಯ ರಾಮತೀರ್ಥ ಪ್ರವಾಸಿ ಕೇಂದ್ರದ ಅಭಿವೃದ್ಧಿಗೆ ಬೆಳಗಾಂ ಜಿಲ್ಲಾ ಪರಿಷತ್ತು ಹಾಗೂ ರಾಜ್ಯ ಸರ್ಕಾರ ಕಾರ್ಯಗತ ಯೋಜನೆಯನ್ನೇನಾದರೂ ರೂಪಿಸಿದೆಯೇ ?

ಆ) ಹಾಗಿದ್ದಲ್ಲಿ ಇದರ ಅಭಿವೃದ್ಧಿಗೆ ಮುಂಬರುವ ಆಯವ್ಯಯದಲ್ಲಿ ಹಣ ಒದಗಿಸಲಾಗಿದೆಯೆ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಹಾಗೂ ಸಾರ್ವಜನಿಕ ಕುಂದು ಕೊರತೆಗಳ ರಾಜ್ಯಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

SRI K. C. MODAGEKAR DESAI.—Speaker. Sir, Whether it is a fact that 2 years back the Hon'ble Tourism Minister had declared that this Ramatirth in Konbargi village is a tourist centre ? Then I am going to ask another supplementary. Atlast the primary essential work should be taken by the government. It is only one kiilometre from Konabargi to Ramtirth. Therefore whether the primary essential work will to be taken up early ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ.—ಸನ್ಮಾನ್ಯ ಅಧ್ಯಕ್ಷರೆ, ರಾಮತೀರ್ಥ ಎಂಬುದು ಬೆಳಗಾಂ ಜಿಲ್ಲೆಯಲ್ಲಿದೆ. ಇದೇ ರಾಮತೀರ್ಥಗಳು ಬೆಳಗಾಂನಲ್ಲಿ ಐದು ಇವೆ. ನಾವು ಪ್ರವಾಸೋದ್ಯಮ ನೀತಿಯಲ್ಲಿ "ಕೊವರಬೆಂಜಿ" ರಾಮತೀರ್ಥವನ್ನು ಕೂಡ 'ಸಿ' ಗ್ರೂಪ್‌ನಲ್ಲಿ ಅಳವಡಿಸಿ, ಅದಕ್ಕೆ ಯಾರಾದರು ಖಾಸಗಿಯವರು ಮುಂದೆ ಬಂದರೆ ಶೇಕಡ ೨೫ ರಷ್ಟು ಸಬ್ಸಿಡಿಯನ್ನು ಮತ್ತು ಇನ್ನಿತರೆ ರಿಯಾಯಿತಿ

ಗಳನ್ನು ಕೊಡುತ್ತಿದ್ದೇವೆ. ಅದೇ ರೀತಿ ಬೆಳಗಾಂ ಜಿಲ್ಲೆಯಲ್ಲಿ ಬೇರೆ ಪ್ರವಾಸಿ ಕೇಂದ್ರಗಳಾದ ಸೊಬಲೆಕ್ಷೇತ್ರ, ಚತ್ತೂರು, ಸೌದತ್ತಿ, ಮಲಪ್ರಭಾಡ್ಯಾಂ, ಗೊಕಾಕ, ಜಲಪಾಲ, ಅಲಸಿ, ಬಾದಾಮಿ, ಶವರಿ, ಮಲ್ಕ, ಘಟಪ್ರಭ ಮುಂತಾದುವುಗಳನ್ನು ಗುರುತಿಸಿ ನಮ್ಮ ಪ್ರವಾಸೋದ್ಯಮ ನೀತಿಯಲ್ಲಿ ಅವುಗಳನ್ನು 'ಸಿ' ಗ್ರೂಪ್‌ನಲ್ಲಿ ಸೇರಿಸಿ ಖಾಸಗಿಯವರಿಗೆ ಪ್ರೋತ್ಸಾಹದನ ಮತ್ತು ರಿಯಾಯಿತಿಗಳನ್ನು ಕೊಡುತ್ತಿದ್ದೇವೆ. ಅದೇ ರೀತಿ ಈ ರಾಮತೀರ್ಥವನ್ನು ಕೂಡ ಖಾಸಗಿಯವರು ಮುಂದೆ ಬಂದರೆ ಅವರಿಗೆ ಪ್ರೋತ್ಸಾಹವನ್ನು ಕೊಡುತ್ತೇವೆ. ಎರಡನೆಯದಾಗಿ ಅಲ್ಲಿನ ರಸ್ತೆಯನ್ನು ರಿಪೇರಿ ಮಾಡಬೇಕು ಎನ್ನುತಕ್ಕ ಪ್ರಶ್ನೆಯನ್ನು ಕೇಳಿದ್ದಾರೆ. ಇದರ ಬಗ್ಗೆ ನಮ್ಮ ಪ್ರವಾಸೋದ್ಯಮ ಇಲಾಖೆಯವರು, ಪಟ್ಟಿ ಮಾಡಿ ಎಲ್ಲೆಲ್ಲಿ ಪ್ರವಾಸಿ ಕೇಂದ್ರಗಳಿವೆಯೋ ಅಲ್ಲೆಲ್ಲಾ ೧೯೯೪-೯೫ನೇ ಸಾಲಿನಲ್ಲಿ ಸುಮಾರು ಆರುನೂರು ಕಿ.ಮೀ.ನಷ್ಟು ರಸ್ತೆಗಳನ್ನು ರಿಪೇರಿ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಈ ಕೆಲಸವನ್ನು ಪಿ.ಡಬ್ಲ್ಯೂ.ಡಿ. ಇಲಾಖೆಯ ಮತಿಯಿಂದ ಮಾಡಲು ಕಾರ್ಯಕ್ರಮವನ್ನು ಹಾಕಿ ಕೊಂಡಿದ್ದೇವೆ.

SRI K. C. MODAGEKAR DESAI.—Last time he had assured me that he is going to give subsidy for the entrepreneurs for the construction of these hotels and other amenities. Therefore, these are the primary essential works. Approach road from Kanbargi village to Ramtirth, only one kilometere road is there and to attract devotees and other tourists, it is most essential to take it up. Therefore, you can discuss with the ZP people and take up this one kilometre road which is approaching from Kanabargi to Ramtirth.

ಶ್ರೀ ಪೆರೀಲ್ ಎಂ. ಮಲ್ಲಪ್ಪ.—ಮಾನ್ಯ ಸದಸ್ಯರು ಹೇಳಿದಂತೆ ಕನಬರ್ಗಿಯಿಂದ ರಾಮತೀರ್ಥ ದವರೆಗಿನ ಅಪ್ರೋಚ್ ರೋಡನ್ನು ೧೯೯೪-೯೫ನೇ ಸಾಲಿನಲ್ಲಿನ ನಮ್ಮ ಕಾರ್ಯಕ್ರಮದ ಯೋಜನೆಯಲ್ಲಿಯೇ ಸೇರಿಸಿಕೊಂಡು ಬೇಗನೆ ಆ ಕೆಲಸವನ್ನು ಮಾಡಿಸಿಕೊಡಲು ಪ್ರಯತ್ನ ಪಡುತ್ತೇನೆ.

EXTENTION OF CITY BUS SERVICE TO RANI CHANNAMMANAGAR I STAGE

273 (727) SRI B. I. PATIL (Uchgaon).—Will the Minister for Transport be pleased to State :—

a) Whether it has come to the notice of the Hon'ble Minister that City Transport Service provided to Rani-Chennammanagar I, II and III Stages and Guruprasadnagar and the adjoining areas in Belgaum is inadequate ?

b) If so, the steps taken by the Government in this regard ?

c) The steps taken to ease the tension of school going children, Office goers and others during peak hours and late nights (details be furnished) ?

d) Whether it has come to the notice of the Government that certain criminal offences have been committed In the City Transport buses due to heavy rush ?

e) If so, the steps taken by the Government to prevent recurrence of such anti-social acts ?